146ನೇ ಅಧಿವೇಶನ
ನಿ-330
ಕ್ರ-65
ಉತ್ತರ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ. ಎಸ್.ವೀಣಾ ಅಚ್ಚಯ್ಯ ಇವರು ನಿಯಮ-330 ರಡಿಯಲ್ಲಿ "ಕೊಡಗು ಜಿಲ್ಲೆಯ ತಿತಿಮತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೇಣಿಹಾಡ್ಲು ಗಿರಿಜನರ ಹಾಡಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಡಾನೆಗಳು ಬಾರದ ರೀತಿಯಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗುತ್ತಿದೆ. ಆದರೆ ಅರಣ್ಯ ಇಲಾಖೆಯು ಆನೆ ಕಂದಕ ತೆಗೆದ ಮಾರ್ಗದಲ್ಲಿಯೇ ರೈಲ್ವೆ ಕಂಬಿ ಅಳವಡಿಸದೇ, ಅವೈಜ್ಞಾನಿಕ ರೀತಿಯಲ್ಲಿ ಬೇರೆ ಮಾರ್ಗದಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಚೇಣಿಹಡ್ಲು ಗಿರಿಜನರ ಹಾಡಿಯ ಜನರು ಹಲವಾರು ತೊಂದರೆಗಳಿಗೆ ಸಿಲುಕಿರುವ ಗಂಭೀರ ಸಮಸ್ಯೆ ಕುರಿತು" ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಹೇಳಿಕೆ.

******

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶವು 843.962 ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ಈ ಪೈಕಿ 358.473 ಚ.ಕಿ.ಮೀ. ಕೊಡಗು ಜಿಲ್ಲೆಯಲ್ಲಿರುತ್ತದೆ. ಕೊಡಗು ಜಿಲ್ಲೆಯಲ್ಲಿ ಮೂರು ವನ್ಯಜೀವಿ ವಲಯಗಳು ಅಂದರೆ ನಾಗರಹೊಳೆ ವನ್ಯಜೀವಿ ವಲಯ (104.074 ಚ.ಕಿ.ಮೀ.), ಆನೆಚೌಕೂರು ವನ್ಯಜೀವಿ ವಲಯ (143.246 ಚ.ಕಿ.ಮೀ.) ಮತ್ತು ಕಲ್ಲಹಳ್ಳ ವನ್ಯಜೀವಿ ವಲಯ (111.153 ಚ.ಕಿ.ಮೀ) ಗಳನ್ನು ಹೊಂದಿರುತ್ತದೆ. ಕೊಡಗು ಜಿಲ್ಲೆಯಲ್ಲಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಗಿರಿಜನ ಹಾಡಿಗಳ ವಿವರ ಈ ಕೆಳಕಂಡಂತಿರುತ್ತದೆ:-

| ಜಿಲ್ಲೆ | ತಾಲ್ಲೂಕು | ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಗಿರಿಜನ ಹಾಡಿಗಳು | | |
|---|---|---|---|---|
| | | ಕೋರ್ ಪ್ರದೇಶ (Core Zone) ದಲ್ಲಿರುವ ಗಿರಿಜನ ಹಾಡಿಗಳ ಸಂಖ್ಯೆ | ಬಫರ್ ಪ್ರದೇಶ (Buffer Zone) ದಲ್ಲಿರುವ ಗಿರಿಜನ ಹಾಡಿಗಳ ಸಂಖ್ಯೆ | ಒಟ್ಟು |
| ಕೊಡಗು | ವಿರಾಜಪೇಟೆ | 21 | 13 | **34** |

ಆನೆಚೌಕೂರು ವನ್ಯಜೀವಿ ವಲಯದ ಕೋರ್ ಪ್ರದೇಶದ ಅಂಚಿನಲ್ಲಿರುವ ಆಯಿರಹೊಸಹಳ್ಳಿ ಮತ್ತು ಚೀಣಿಹಡ್ಲು ಹಾಡಿಗಳ ವಿವರ ಈ ಕೆಳಕಂಡಂತಿರುತ್ತದೆ:-

| ಕ್ರ.ಸಂ. | ಹಾಡಿಯ ಹೆಸರು | ವಿಸ್ತೀರ್ಣ (ಹೆಕ್ಟೇರ್) | ಕುಟುಂಬಗಳ ಸಂಖ್ಯೆ |
|---|---|---|---|
| 1 | ಆಯಿರ ಹೊಸಹಳ್ಳಿ | 55.00 | 54 |
| 2 | ಚೀಣಿಹಡ್ಲು | 71.00 | 82 |
| ಒಟ್ಟು | | **126.00** | **136** |

---2

ಆನೆಚೌಕೂರು ವನ್ಯಜೀವಿ ವಲಯದ ಕೋರ್ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಚೇಣಿಹಡ್ಲು ಮತ್ತು ಆಯಿರಹೊಸಹಳ್ಳಿಯ ಹಾಡಿಗಳಲ್ಲಿ ಕಾಡಾನೆಗಳು ಬರದಂತೆ ತಡೆಯಲು 2015 ರಲ್ಲಿ ಆನೆತಡೆ ಕಂದಕಗಳನ್ನು ನಿರ್ಮಿಸಲಾಗಿತ್ತು. ಈ ಪ್ರದೇಶದಲ್ಲಿ ಹೆಚ್ಚಿನ ಮಾನವ-ಆನೆ ಸಂಘರ್ಷ ಇರುವ ಕಾರಣ ಪ್ರಸಕ್ತ ಸಾಲಿನಲ್ಲಿ 3.345 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಗಳನ್ನು ಅರಣ್ಯ ಪ್ರದೇಶದ ಗಡಿಯುದ್ದಕ್ಕೂ ಆಯಿರಹೊಸಳ್ಳಿ ಮತ್ತು ಚೇಣಿಹಡ್ಲು ಹಾಡಿಗಳ ಪ್ರದೇಶದಲ್ಲಿ ನಿರ್ಮಿಸಲು ಯೋಜಿಸಲಾಗಿತ್ತು (ಮರಪಾಲ ಸೇತುವೆಯಿಂದ ಕೆ.ಎಂ.. ಕೊಲ್ಲಿಯವರೆಗೆ 2.564 ಕಿ.ಮೀ. ಹಾಗೂ ಚೇಣಿಹಡ್ಲು ಗೇಟ್ ನಿಂದ ಮರಪಾಲ ಸೇತುವೆವರೆಗೆ 0.845 ಕಿ.ಮೀ.).

ಆಯಿರಹೊಸಹಳ್ಳಿ ಮತ್ತು ಚೇಣಿಹಡ್ಲು ಹಾಡಿಗಳ ಗಿರಿಜನರು 4.70 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅನ್ನು ಹಾಡಿಯ ಹಿಂಭಾಗದ ಅರಣ್ಯ ಪ್ರದೇಶದೊಳಗೆ ಈಗಾಗಲೇ ಇರುವ ಆನೆ ತಡೆ ಕಂದಕ ನಿರ್ಮಾಣದ ಪ್ರದೇಶದಲ್ಲಿಯೇ ಮಾಡುವಂತೆ ಹಾಗೂ ಅರಣ್ಯದ ಗಡಿ ಉದ್ದದ ಪ್ರದೇಶದಲ್ಲಿ ನಿರ್ಮಿಸಬಾರದೆಂದು ಒತ್ತಾಯಿಸಿರುತ್ತಾರೆ. ಈ ರೀತಿ ಮಾಡಿದಲ್ಲಿ ಒಟ್ಟು 4.70 ಕಿ.ಮೀ. ಉದ್ದದ ಬ್ಯಾರಿಕೇಡ್ ನಿರ್ಮಿಸಬೇಕಾಗಿದ್ದು, ಇದರಿಂದ 1.40 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಹೆಚ್ಚುವರಿಯಾಗುತ್ತದೆ. ಅಲ್ಲದೇ ಈ ಹಾಡಿಯಲ್ಲಿ ನಿರ್ಮಿಸಿದಲ್ಲಿ ಬೇರೆ ಹಾಡಿಯವರಿಂದ ಸಹ ಇದೇ ಬೇಡಿಕೆಯ ಸಂಭವವಿರುತ್ತದೆ.

ಈ ರೀತಿ ರೈಲ್ವೆ ಬ್ಯಾರಿಕೇಡ್ ಮಾಡಲು ಉದ್ದೇಶಿಸಿದ್ದ ಈ ಪ್ರದೇಶದ ಮಾರ್ಗದಲ್ಲಿ ಈಗಾಗಲೇ ನಿರ್ಮಿಸಿದ್ದ ಆನೆ ನಿರೋಧಕ ಕಂದಕಗಳು ಇದ್ದು, ಕೆ.ಎಂ.ಕೊಲ್ಲಿ ಭಾಗದಲ್ಲಿ 2.564 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಪೈಕಿ 0.250 ಕಿ.ಮೀ. ಕಾಮಗಾರಿ ಪೂರ್ಣಗೊಂಡ ನಂತರ ಚೇಣಿಹಡ್ಲು ಹಾಗೂ ಆಯಿರ ಹೊಸಹಳ್ಳಿಯ ಗಿರಿಜನರಿಂದ ಪ್ರತಿಭಟನೆ ಉಂಟಾಗಿರುತ್ತದೆ. ಆದಕಾರಣ, ಈ ಹಂತದಲ್ಲಿ ಕಾಮಗಾರಿಯನ್ನು ಸ್ಥಗಿತ ಗೊಳಿಸಬೇಕಾಗಿರುತ್ತದೆ.

ಸ್ಥಳೀಯ ಜನಪ್ರತಿನಿಧಿಗಳು, ಕಾಫಿ ಬೆಳೆಗಾರರು, ರೈತರು ಮತ್ತು ಸಾರ್ವಜನಿಕರು ಹಾಗೂ ಇಲಾಖೆಯ ಅಧಿಕಾರಿಗಳು ಇಲಾಖೆಯು ಕಾಮಗಾರಿಯನ್ನು ಪೂರ್ಣಗೊಳಿಸಲು ಅನುವು ಮಾಡಿಕೊಡುವಂತೆ ಗಿರಿಜನರ ಮನವೊಲಿಸಲು ಪ್ರಯತ್ನಿಸಿರುತ್ತಾರೆ. ಆದಾಗ್ಯೂ, ಹಾಡಿಯ ಗಿರಿಜನರು ಅದನ್ನು ಒಪ್ಪದೇ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಇಲಾಖೆಗೆ ಸಹಕಾರ ನೀಡಿರುವುದಿಲ್ಲ.

ರೈಲ್ವೆ ಬ್ಯಾರಿಕೇಡ್ ಕಾಮಗಾರಿಯು ಖಾಯಂ/ಶಾಶ್ವತ ನಿರ್ಮಾಣವಾಗಿದ್ದು ಮತ್ತು ಇದರ ವೆಚ್ಚವು ಸಹ ದುಬಾರಿಯಾಗಿರುವುದರಿಂದ ಈ ಕಾಮಗಾರಿಯನ್ನು ಅರಣ್ಯ ಪ್ರದೇಶದ ಗಡಿಯುದ್ದಕ್ಕೂ ನಿರ್ಮಿಸಬೇಕಾಗಿದ್ದು, ಅರಣ್ಯ ಪ್ರದೇಶದ ಒಳಭಾಗದಲ್ಲಲ್ಲ. ಆದಾಗ್ಯೂ ಹಾಡಿಯೊಳಗೆ ಬೆಳೆ ಹಾನಿಯನ್ನು ತಪ್ಪಿಸಲು ಇನ್ನು ಮುಂದೆ ಅವಶ್ಯಕತೆ ಬಂದಲ್ಲಿ ಹಾಡಿಯ ಸುತ್ತಲು ಈಗಾಗಲೇ ಇರುವ ಆನೆ ತಡೆ ಕಂದಕಗಳನ್ನು ಬಲಪಡಿಸಲಾಗುವುದು ಹಾಗೂ ಅವಶ್ಯವಿದ್ದಲ್ಲಿ ಸೌರತಂತಿ ಬೇಲಿಯನ್ನು ನಿರ್ಮಿಸಲಾಗುವುದು.

ಸಂಖ್ಯೆ: ಅಪಜೀ 39 ಎಫ್‌ಡಬ್ಲ್ಯೂಎಲ್ 2022

(ಉಮೇಶ್ ವಿ.ಕತ್ತಿ)
ಅರಣ್ಯ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು